ಉಜ್ಜನಕೊಪ್ಪ ಕಾರ್ಯಕಾರಿ ಅಭಯಂತರರು ಇದ್ದಾಗ ಡಾಂಬರೀಕರಣ ಮಾಡಲಾಯಿತು. ನಂತರ ಈ ರಸ್ತೆಯ ಮೇಲೆ ಕಾರ್ಪೆಟಿಂಗ್ ಹಾಗೂ ರೀ ಕಾರ್ಪೆಟಿಂಗ್ ಮಾಡಿರುವುದಿಲ್ಲ ಕಾರ್ಪೆಟಿಂಗ್ ಮೊದಲು ಸ್ಥಳೀಯ ಅಧಿಕಾರಿಗಳನ್ನು ವಿನಂತಿಸಿಕೊಂಡಾಗ ಅವರು ಈ ಕೆಲಸಕ್ಕೆ ಹೆಚ್ಚಿನ ಹಣ ಬೇಕಾಗುವುದು ಇದು ಆಯವ್ಯಯ ಪಟ್ಟಿಯಲ್ಲಿ ಸೇರಿದಾಗ ಮಾತ್ರ ಎನ್ನುತ್ತಾರೆ. ಆದಕಾರಣ ಈ ಕೆಲಸಕ್ಕೆ ಸುಮಾರು 30 ಲಕ್ಷ ರೂ. ಬೇಕಾಗುವುದೆಂದು ಅನ್ನಲಿಕ್ಕೆ ಹತ್ತಿರುವರು. ಆದಕಾರಣ ಈ ರಸ್ತೆಯನ್ನು ಕೂಡಲೇ ದುರಸ್ಥಿ ಮಾಡಲು ಕಾರ್ಯಕಾರಿ ಅಭಿಯಂತರರು ಬೆಳಗಾಂ ಇವರಿಗೆ ಆದೇಶ ನೀಡುವುದಾಗಬೇಕು ಎಂದು ನಾನು ಈ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ) **ಮಾನ್ಯ ಅಧ್ಯಕ್ಷರೇ,**

ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲಕಿಕಟ್ಟೆ-ಮಕ್ಕಳಗೇರಿ ಕಾಡಂ- ಹಲಕಿ ಕ್ರಾಸ್ನವರೆಗೆ ಒಟ್ಟು 24 ಕಿ.ಮೀ. ಉದ್ದವಿದ್ದು, ಇದರಲ್ಲಿ 0-13ನೇ ಕಿ.ಮೀ. ವರೆಗೆ ಇತ್ತೀಚೆಗೆ ಮೇಲ್ದರ್ಜೆಗೇರಿಸಿ ಮುಖ್ಯ ಜಿಲ್ಲಾ ರಸ್ತೆಯಾಗಿದೆ. 13 ರಿಂದ 24ನೇ ಕಿ.ಮೀವರೆಗೆ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿದ್ದ ಮುಖ್ಯ ಜಿಲ್ಲಾ ರಸ್ತೆಯಾಗಿತ್ತು. ಈ ರಸ್ತೆಯ 3.75 ಮೀಟರ್ ಅಗಲಕ್ಕೆ ಬಹಳ ಹಿಂದೆ ಡಾಂಬರು ಮಾಡಿದೆ. ಈ ರಸ್ತೆಯೆ ಆಯ್ದ ಭಾಗಗಳಿಗೆ ಮರು ಜಲ್ಲಿ ಮಾಡಿ ಮರು ಡಾಂಬರೀಕರಣ ಮಾಡುವುದಕ್ಕೆ 18.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಈ ರಸ್ತೆಯನ್ನು ಪ್ರತಿವರ್ಷವೂ ಲಭ್ಯವಾಗುವ ನಿರ್ವಹಣಾ ಅನುದಾನದಿಂದ ಸಂಚಾರಕ್ಕೆ ಅಡಚಣೆ ಉಂಟಾಗದಂತೆ, ನಿರ್ವಹಿಸಲಾಗುತ್ತಿದೆ. ಈ ರಸ್ತೆಯ ಮರು ಡಾಂಬರೀಕರಣವನ್ನು ಮುಂದಿನ ಸಾಲುಗಳಲ್ಲಿ ಅನುದಾನದ ಲಭ್ಯತೆಯನ್ನು ಅನುಸರಿಸಿ, ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

(6) ಹಟ್ಟಿ ಲಕ್ಕಮ್ಮ ವಿದ್ಯಾಸಮಿತಿ, ಚನ್ನಪಟ್ಟಣದಲ್ಲಿ ಟಿ.ಸಿ.ಹೆಚ್. ಪ್ರವೇಶದ ಬಗ್ಗೆ

SRI SADATH ALI KHAN (Channapatna) : The Hon'ble Minister for Primary and Secondary Education be pleased to state that the Hatti Lakkamma Vidya Samsthe, Channapatna town, Shree, Munishwra Swamy T.C.H. Training Centre has violated all the rules and Regulations of the Government while taking admission to the T.C.H. Course. The Government accorded permission to admit only thirty students who were eligible to take examination. Whether it has come to the notice of the Government that the above Management has given admission to 124 students for T.C.H. Course by collecting huge donations ranging from Rs. 8,000/- to Rs. 15,000/- Whether it is a fact that the 94 students of the T.C.H. Course have lodged their complaint against the institution to the Governor of Karnataka, Hon'ble Chief Minister, concerned Ministers and to the officers for justice? Whether the Government would constitute an enquiry in this regard?

Secondly whether the Government is considering to regularise the illegal admission of 94 students who have paid donation ranging from Rs. 8,000/- to Rs. 15,000/- to appear for the examination for the year 1993-94? Whether

the Government is considering to take over the Institution as the Institution has violated all the Rules and Regulations of the Government since its inception?

Thirdly whether the Hon'ble Minister for Primary and Secondary Education would take drastic action against the Management of the Institution and the officers who are involved and who have colluded with the Management and they may be suspended immediately till the enquiry into the whole episode is completed?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಶಿಕ್ಷಣಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದಲ್ಲಿರುವ ಮುನೇಶ್ವರ ಸ್ವಾಮಿ ಉಪಾಧ್ಯಾಯರ ಟ್ರೈನಿಂಗ್ ಇನ್ಸ್ಟಿಟ್ಯೂಟ್ನಲ್ಲಿ 30 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. 93-94ನೇ ಸಾಲಿನಲ್ಲಿ ಈ ಸಂಸ್ಥೆಯು 94 ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿದ್ದರು. ಇದನ್ನು ಅಧಿಕಾರಿ ವರ್ಗದವರು ಭೇಟಿ ಮಾಡಿದಾಗ ಇದನ್ನು ಕಂಡು ಹಿಡಿದು ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ವಶಪಡಿಸಿಕೊಂಡಿದ್ದಾರೆ. ಅಡ್ಮೀಷನ್ ರಿಜಿಸ್ಟರ್ನಲ್ಲಿ 93-94ಕ್ಕೆ 23-9-93ರವರೆಗೂ ದಾಖಲಾಗಿದೆ. 124 ಜನ ಸೇರಿಸಿದ್ದೇವೆ ಅಂತ ಒಂದೇ ಅಟೆಂಡೆನ್ಸ್ ರಿಜಿಸ್ಟರ್ನಲ್ಲಿ ಬರೆಯಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು 30 ಜನ ವಿದ್ಯಾರ್ಥಿಗಳಿಗೆ ಮಾತ್ರ ಅಡ್ಮಿಷನ್ ಕೊಡಿ, ಬೇರೆಯವರಿಗೆ ಕೊಡಬೇಡಿ ಎನ್ನುವ ಸೂಚನೆಯನ್ನು ಕೊಡಲಾಗಿದೆ. ಡೊನೇಶನ್ ವಸೂಲಿ ಮಾಡಿರುವ ಬಗ್ಗೆ ಯಾರಿಂದಲೂ ಫಿರ್ಯಾದು ಬಂದಿಲ್ಲ. 92-93ನೇ ಸಾಲಿನಲ್ಲೂ ನಿಗಧಿಯಾದುದಕ್ಕಿಂತ 40 ಜನ ಹುಡುಗರನ್ನು ಜಾಸ್ತಿ ತೆಗೆದುಕೊಂಡಿದ್ದರು. ಮಾನ್ಯ ಹೈಕೋರ್ಟ್ ಆಜ್ಞೆಯಂತೆ ಇವರನ್ನು ಪರೀಕ್ಷೆಗೆ ಕೂರಿಸಲಾಗಿದೆ. ಈ ಸಂಸ್ಥೆಗೆ ಏತಕ್ಕೆ ನಿಮ್ಮಮೇಲೆ ಕ್ರಮ ತೆಗೆದುಕೊಳ್ಳಬಾರದು ಎನ್ನುವನೋಟೀಸ್ ಸಹ ಜಾರಿ ಮಾಡಲಾಗಿದೆ. ಬೆಂಗಳೂರಿನ ಡಿಡಿಪಿಐ ರವರಿಗೆ ಆದೇಶವನ್ನು ಕಳುಹಿಸಿ ಇವರಮೇಲೆ ಕ್ರಮತೆಗೆದುಕೊಳ್ಳಿ ಎಂದು ತಿಳಿಸಲಾಗಿದೆ. ನಿಗಧಿಯಾಗಿದ್ದಕ್ಕಿಂತ ಹೆಚ್ಚು ಇರುವ ವಿದ್ಯಾರ್ಥಿಗಳನ್ನು ಅಡ್ಮೀಷನ್ಗೆ ಒಪ್ಪಿಸುವುದಕ್ಕೆ ಸಕ್ರಮಗೊಳಿಸುವುದಕ್ಕೆ ಸಾಧ್ಯ ಇಲ್ಲ. ಈ ಸಂಸ್ಥೆಗೆ ಕೊಟ್ಟಿರತಕ್ಕಂಥ ರೆಕಗ್ನಿಷನ್ ವಾಪಸ್ಸು ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಿರುವುದರಿಂದ ಈ ಸಂಸ್ಥೆಯನ್ನು ಸರ್ಕಾರದವರು ತೆಗೆದುಕೊಳ್ಳಬೇಕಾದುದು ಇಲ್ಲ. ಇಲಾಖೆಯವರು ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿರುವುದರಿಂದ ಆ ಪ್ರಕಾರವಾಗಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಯಾವ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2-00 ಗಂಟೆಗೆ ಮುಂದೂಡಿ ಮತ್ತೆ 3-00 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು 3-45ಕ್ಕೆ ಮತ್ತೆ ಪ್ರಾರಂಭವಾಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಭಾಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿಯವರು) ವಹಿಸಿದ್ದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ

+ ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಸಭಾಧ್ಯಕ್ಷರೇ, ಹೊಸ ವರ್ಷ ರಾಜ್ಯಪಾಲರು ಮಾಡಿದಂತಹ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ